ಸಾರ್ವಜನಿಕ ಶಿಕ್ಷಣ ಇಲಾಖೆಯಂಥ ಬೃಹತ್ ಸಾಂಸ್ಥಿಕ ವ್ಯವಸ್ಥೆಯೊಂದು 'ಗುರುಚೇತನ'ದಂಥ ದೂರದೃಷ್ಟಿಯುಳ್ಳ ಪರಿವರ್ತನಾ ಉಪಕ್ರಮವನ್ನು ಕೈಗೊಂಡು ಇಲಾಖೆಯ ಅತ್ಯುತ್ತಮ ಪ್ರತಿಭೆಗಳನ್ನು ತೊಡಗಿಸಲು ಮುಂದೆ ಬಂದಿರುವುದು ಶಿಕ್ಷಕರ ವೃತ್ತಿಪರ ಅಭಿವೃದ್ಧಿಗೆ ಬಲ ನೀಡಿದಂತಾಗಿದೆ.

ಅತ್ಯುತ್ಕೃಷ್ಟ ಮನಸ್ಸುಗಳಾಗಲು ಶಿಕ್ಷಕರಿಗೆ ಸ್ಫೂರ್ತಿ

ಕೋಲಾರದ ಕಿರಿಯ ಪ್ರಾಥಮಿಕ ಶಾಲೆಯ ಸ್ವಪ್ರೇರಿತ ಶಿಕ್ಷಕಿಯೊಬ್ಬರು ತಾವು ಕೈಗೊಂಡ ಇಂಗ್ಲಿಷ್ ಬೋಧನೆಯ ಕುರಿತಾದ ಕ್ರಿಯಾಸಂಶೋಧನಾ ಕಾರ್ಯಯೋಜನೆಯನ್ನು ತೋರಿಸಿದರು. ಅವರಿಗೆ ಹದಿಮೂರು ವರ್ಷ ಕೆಲಸ ಮಾಡಿದ ಅನುಭವವಿದೆ. ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ, ಅದರಲ್ಲಿಯೂ ಮೊದಲನೆಯ ತರಗತಿಯ ಮಕ್ಕಳಿಗೆ ಇಂಗ್ಲಿಷನ್ನು ಪರಿಣಾಮಕಾರಿಯಾಗಿ ಬೋಧಿಸುವ ಕುರಿತಾಗಿ ತಾವು ಹೊಂದಿದ್ದ ತೀವ್ರ ಕಾಳಜಿಯ ಕಾರಣ, ಅವರು ಈ ಕಾರ್ಯಯೋಜನೆಯನ್ನು ಕೈಗೆತ್ತಿಕೊಂಡಿದ್ದರು. ತಾವು ಹನ್ನೆರಡು ಶಾಲೆಗಳಲ್ಲಿ ಕೈಗೊಂಡ ಈ ಪ್ರಯತ್ನಗಳನ್ನು ಪೂರೈಸಲು ತೀವ್ರ ತರಹದ ವೈಯಕ್ತಿಕ ಸಮಸ್ಯೆಗಳನ್ನು ಅವರು ಜಯಿಸಬೇಕಾಗಿತ್ತು. ಜೊತೆಗೆ ತಮ್ಮ ವೈಯಕ್ತಿಕ ಸಮಯ ಮತ್ತು ಶ್ರಮವನ್ನು ಅವರು ಇದಕ್ಕಾಗಿ ವ್ಯಯಿಸಿದ್ದರು.

ರಾಮನಗರದ, ಒಳಪ್ರದೇಶದಲ್ಲಿರುವ ಚಿಕ್ಕದೊಂದು ಹಳ್ಳಿಯಿಂದ ಬಂದ, ಶಿಕ್ಷಕ ವೃತ್ತಿಗೆ ಕೇವಲ ಒಂದು ವರ್ಷದ ಹಿಂದಷ್ಟೇ ಸೇರಿದ, ಯುವ ಶಿಕ್ಷಕರೊಬ್ಬರು ಕಲಿಯಲು ಹಾಗೂ ತನ್ನನ್ನೇ ತಾನು ಅಭಿವೃದ್ಧಿಪಡಿಸಿಕೊಳ್ಳಲು ತೋರಿದ ಆಸಕ್ತಿ ಅಗಾಧವಾದದ್ದು. ಶಿಕ್ಷಕರಿಗಾಗಿ ನಡೆದ ವೃತ್ತಿ ಬೆಳವಣಿಗೆ ಕಾರ್ಯಾಗಾರಗಳನ್ನು ನಿಭಾಯಿಸುವಲ್ಲಿ ಅವರು ಅಪಾರವಾದ ಧೈರ್ಯ ಮತ್ತು ನಂಬಿಕೆಯನ್ನು

ಪ್ರದರ್ಶಿಸಿದರು. ಕಾರ್ಯಾಗಾರದಲ್ಲಿ ಹಾಜರಿದ್ದ ಶಿಕ್ಷಕರಲ್ಲಿ ಹಲವರ ಸೇವಾ ಅನುಭವವೇ ಈ ಶಿಕ್ಷಕರ ವಯಸ್ಸಿನಷ್ಟು ಅಥವಾ ಅದಕ್ಕಿಂತಲೂ ಹೆಚ್ಚಿತ್ತು.

ಬೆಂಗಳೂರಿನ ಗ್ರಾಮೀಣ ಭಾಗವಾದ ನೆಲಮಂಗಲದಿಂದ ಬಂದ ಮತ್ತೊಬ್ಬ ಚಿಂತನಶೀಲ ಶಿಕ್ಷಕರು ಅದಾಗಲೇ ಇಲಾಖೆಯ ಕೆಲವು ತರಬೇತಿಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕೆಲಸ ಮಾಡಿದ ಅನುಭವವನ್ನು ಹೊಂದಿದ್ದರು. ಮುಖ್ಯವಾಗಿ ಸಮಾಜದಲ್ಲಿರುವ ಮೂಢನಂಬಿಕೆಗಳನ್ನು ನಿವಾರಿಸುವ ಉದ್ದೇಶದಿಂದ, ತನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವ ಮಾರ್ಗವಾಗಿ ಅವರು ಶಿಕ್ಷಕ ತರಬೇತಿಯನ್ನು ಆಯ್ದುಕೊಂಡಿದ್ದರು.

ಕಳೆದ ವಾರ ನಾನು ಈ ಮೂವರನ್ನೂ ಭೇಟಿ ಮಾಡಿದೆ. ಬೆಂಗಳೂರು ಮತ್ತು ಅದರ ಸುತ್ತಮುತ್ತಲಿನ ಆರು ಜಿಲ್ಲೆಗಳಿಂದ ಬಂದ ನೂರಾಮೂವತ್ತೈದು ಜನರಲ್ಲಿ ಇವರೂ ಇದ್ದರು. ಒಬ್ಬೊಬ್ಬರೊಡನೆಯೂ ಪ್ರತ್ಯೇಕವಾಗಿ ಕನಿಷ್ಠ ಹದಿನೈದರಿಂದ ಇಪ್ಪತ್ತು ನಿಮಿಷಗಳನ್ನು ಕಳೆದಿದ್ದೆ. ಅವರಲ್ಲಿ ಶಿಕ್ಷಕರು, ಮುಖ್ಯ ಶಿಕ್ಷಕರು, ಇನ್ನಿತರ ಶೈಕ್ಷಣಿಕ ಅಧಿಕಾರಿಗಳು ಇದ್ದರು. ಅವರೆಲ್ಲರೂ ಕರ್ನಾಟಕದಲ್ಲಿ ಪುನರುಜ್ಜೀವಿತಗೊಂಡ ಶಿಕ್ಷಕರ ವೃತ್ತಿಪರ ಅಭಿವೃದ್ಧಿ ಪ್ರಕ್ರಿಯೆಗೆ ಸೂಕ್ತ ಸಂಪನ್ಮೂಲ ವ್ಯಕ್ತಿಗಳನ್ನು ಆಯ್ಕೆ ಮಾಡುವ ಅನನ್ಯವಾದ ರಾಜ್ಯವ್ಯಾಪಿ ಕಾರ್ಯವೊಂದರ ಭಾಗವಾಗಿದ್ದರು. ಡಿಎಸ್ಇಆರ್‌ಟಿಯು ಈ ಮೊದಲೇ ನಡೆಸಿದ ಲಿಖಿತ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದರು. ಈ ಅನುಸಂಧಾನದ ಪ್ರಕ್ರಿಯೆಗೆ, ಮೌಲ್ಯಮಾಪನಕ್ಕೆ ಒಳಗಾಗುವುದಕ್ಕೆ ಹಾಗೂ ಸಂಪನ್ಮೂಲ ವ್ಯಕ್ತಿಗಳಾಗಿ ಆಯ್ಕೆಯಾಗುವುದಕ್ಕೆ, ಜಿಲ್ಲಾಮಟ್ಟದಲ್ಲಿ ಶಿಕ್ಷಕರಿಗೆ ತರಬೇತಿ ಕಾರ್ಯಾಗಾರಗಳನ್ನು ನಡೆಸುವಾಗ ಸುಗಮಕಾರರಾಗಿ ಕಾರ್ಯನಿರ್ವಹಿಸುವುದಕ್ಕೆ ತಾವೇ ಆಯ್ಕೆಯಾಗಿದ್ದರು.

ಸರ್ಕಾರ ಮತ್ತು ನಮ್ಮ ಸಂಸ್ಥೆಗಳೆರಡರಿಂದಲೂ ಬಂದ ರಾಜ್ಯ ಸಂಪನ್ಮೂಲ ವ್ಯಕ್ತಿ(ಎಸ್‌ಆರ್‌ಪಿ)ಗಳು ಹಾಗೂ ಡಯಟ್‌ನಿಂದ ಒಬ್ಬರು ಬೋಧಕ ಸಿಬ್ಬಂದಿಯನ್ನು ಒಳಗೊಂಡ ಸಂದರ್ಶಕರ ಸಮಿತಿಯಲ್ಲಿ ನಾನಿದ್ದೆ. ಈ ಸಮಿತಿಯನ್ನು ಬೆಂಗಳೂರು ಮತ್ತು ಅದರ ಸುತ್ತಮುತ್ತಲಿನ ಆರು ಜಿಲ್ಲೆಗಳ ಶಿಕ್ಷಕರು ಹಾಗೂ ಶೈಕ್ಷಣಿಕ ಅಧಿಕಾರಿಗಳೊಡನೆ ಸಂವಹಿಸಿ, ಅವರಲ್ಲಿ ಸಮರ್ಥ ಹಾಗೂ ಇಚ್ಛೆಯುಳ್ಳವರನ್ನು ಗುರುತಿಸುವುದಕ್ಕಾಗಿ ರಚಿಸಲಾಗಿತ್ತು. ಇದು ಒಂದಿಡೀ ವಾರದ ಗಹನವಾದ ಹಾಗೂ ಪರಿಶ್ರಮದ ಕೆಲಸವಾಗಿತ್ತು. ನಾವು ಒಂದೊಂದು ಜಿಲ್ಲೆಯಲ್ಲಿಯೂ ಒಂದೊಂದು ದಿನವನ್ನು ಕಳೆದೆವು. ಅಲ್ಲಿ ಅದೇ ಹೊತ್ತಿಗೆ ಕನ್ನಡ, ಹಿಂದಿ, ವಿಜ್ಞಾನ, ಗಣಿತ, ಸಮಾಜ ವಿಜ್ಞಾನ, ನಲಿ–ಕಲಿ ಮತ್ತು ಶೈಕ್ಷಣಿಕ

ದೃಷ್ಟಿಕೋನಗಳು ಹೀಗೆ ಬೇರೆ ಬೇರೆ ವಿಷಯಗಳಿಗೆ ಸಂಬಂಧಿಸಿದ ಸಂದರ್ಶಕರ ಏಳು ಸಮಿತಿಗಳಿದ್ದು ಅವು ಜನರನ್ನು ಒಬ್ಬೊಬ್ಬರಾಗಿ ಸಂದರ್ಶಿಸಿದವು. ಇಂತಹ ಸಂದರ್ಶಕರ ಐದು ಗುಂಪುಗಳಿದ್ದು, ಅವು ಏಕಕಾಲಕ್ಕೆ ರಾಜ್ಯದ ಐದು ವಿವಿಧ ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಹಾಗೆ ಆ ಒಂದು ವಾರದಲ್ಲಿ ಐದರಿಂದ ಆರು ಜಿಲ್ಲೆಗಳಂತೆ ಇಡೀ ರಾಜ್ಯದಲ್ಲಿ ಕಾರ್ಯನಿರ್ವಹಿಸಬೇಕಿತ್ತು. ನಮಗಿದ್ದ ಸ್ಥೂಲ ಆದೇಶವೆಂದರೆ, ಈ ವರ್ಷ ಐವತ್ತು ಸಾವಿರ ಶಿಕ್ಷಕರಿಗೆ ಅತ್ಯಂತ ಪರಿಣಾಮಕಾರಿ ವಿಧಾನದಲ್ಲಿ ತರಬೇತಿ ನೀಡಲು ಸಾಧ್ಯವಾಗುವಂತೆ, ಪ್ರತಿ ಜಿಲ್ಲೆಯಿಂದ ಸಮರ್ಥರಾದ, ಆಸಕ್ತಿಯುಳ್ಳ ಐವತ್ತಾರು ಜನರಂತೆ, ಇಡೀ ರಾಜ್ಯದಿಂದ ಸಕಾರಾತ್ಮಕ ಒಲವಿರುವ 1904 ದಕ್ಷ ಸಂಪನ್ಮೂಲ ವ್ಯಕ್ತಿಗಳನ್ನು ಆಯ್ಕೆ ಮಾಡುವುದು.

ರಾಜ್ಯ ಶಿಕ್ಷಣ ಇಲಾಖೆಯು ಸೇವಾನಿರತ ಶಿಕ್ಷಕರ ಅಭಿವೃದ್ಧಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ಮಹತ್ತರ ಬದಲಾವಣೆಗಳನ್ನು ತರಲು ಕ್ರಮ ಕೈಗೊಂಡಿರುವುದರ ಕುರಿತು ಕೆಲವು ತಿಂಗಳುಗಳ ಹಿಂದೆ ನಾನು ಬಿ.ಫಸ್ಟ್ ಎಂಬ ಆನ್‌ಲೈನ್ ಪತ್ರಿಕೆಯ ಅಂಕಣವೊಂದರಲ್ಲಿ ಬರೆದಿದ್ದೆ. ಮಾನಸಿಕವಾಗಿ ಹಾಗೂ ದೈಹಿಕವಾಗಿ ಅದೆಷ್ಟೇ ನಿತ್ರಾಣಗೊಳಿಸುವಂಥದ್ದೇ ಆಗಿದ್ದರೂ ಇದರಲ್ಲಿ ಮೊದಲಿನಿಂದಲೂ ತೊಡಗಿಕೊಂಡಿರುವ ನಮಗೆ ಈ ಇಡೀ ವಿಧಾನವು ತುಂಬಾ ಉಲ್ಲಾಸಕರವಾದ, ನವೀನ ಉಪಕ್ರಮವಾಗಿತ್ತು. ಈ ಪ್ರಯತ್ನವು, ತರಬೇಕಾದ ಬದಲಾವಣೆಗಳ ಪ್ರಮಾಣ ಹಾಗೂ ತೀವ್ರತೆಗೆ ಅನುಗುಣವಾಗಿ, ಇನ್ನಿತರ ರಾಜ್ಯಗಳೂ ಅನುಕರಿಸಬಹುದಾದ ಮಾನದಂಡವನ್ನು ನಿರ್ಧರಿಸುವ ಸಾಧ್ಯತೆಯನ್ನು ಪಡೆದಿದೆ.

ಕಳೆದ ವರ್ಷದ ತನಕ ಶಿಕ್ಷಕ ಅಭಿವೃದ್ಧಿಗೆ ಸಂಬಂಧಿಸಿದಂತೆ ನಡೆದ ಪ್ರಯತ್ನಗಳನ್ನು ತುಲನಾತ್ಮಕವಾಗಿ ನೋಡೋಣ. ಸರ್ಕಾರವು ತರಬೇತಿ ಮಾಡ್ಯೂಲ್‌ಗಳನ್ನು ವಿನ್ಯಾಸಗೊಳಿಸುವ ವಿಷಯದಲ್ಲಿ 'ಮೇಲಿನಿಂದ – ಕೆಳಕ್ಕೆ' ಒಮ್ಮುಖವಾಗಿ ಹರಿದು ಬರುವ ವಿಧಾನವನ್ನು ಬಳಸುತ್ತಿತ್ತು. ಅದರರ್ಥ ಇಷ್ಟೇ, ರಾಜ್ಯ ಮಟ್ಟದಲ್ಲಿ ಅಧಿಕಾರವನ್ನು ಹೊಂದಿರುವವರೊಬ್ಬರು, ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯವು ಬಿಡುಗಡೆ ಮಾಡುವ ಹಣಕಾಸನ್ನು ಅವಲಂಬಿಸಿ, ಶಿಕ್ಷಕರು ಯಾವ ತಿಂಗಳಿನಲ್ಲಿ ಎಷ್ಟು ದಿನಗಳ ಕಾಲ ಯಾವ ತರಹದ ತರಬೇತಿಯನ್ನು ಪಡೆದುಕೊಳ್ಳಬೇಕು ಎಂಬುದನ್ನು ನಿರ್ಧರಿಸುತ್ತಾರೆ (ಸಾಧಾರಣವಾಗಿ ಅದು ಶೈಕ್ಷಣಿಕ ಅವಧಿಯ ತುತ್ತತುದಿಗಿದ್ದು ಆಗ ಶಿಕ್ಷಕರ ಮೇಲೆ ಪಠ್ಯಕ್ರಮವನ್ನು ಮುಗಿಸುವ ತೀವ್ರ ಒತ್ತಡವಿರುತ್ತದೆ.). ಅದಕ್ಕೂ ಮುಖ್ಯವಾಗಿ, ತರಬೇತಿಯ ವಸ್ತುವಿಷಯದ ಆಳವಾದ ತರಬೇತಿಯನ್ನು ನೀಡುವ ಬೋಧಕವರ್ಗದ

ಜ್ಞಾನಸಂಪನ್ನತೆ, ಚರ್ಚೆಗಳ ಗುಣಮಟ್ಟ ಹಾಗೂ ತರಬೇತಿ ನೀಡುವ ತಾಣಗಳಲ್ಲಿ ಮೂಲಭೂತ ಸೌಕರ್ಯಗಳ ಲಭ್ಯತೆ ಮುಂತಾದವುಗಳ ಕಾಳಜಿಯನ್ನು ಅಗತ್ಯ ಮಟ್ಟದಲ್ಲಿ ತೆಗೆದುಕೊಳ್ಳುತ್ತಿರಲಿಲ್ಲ. ಇಂತಹ ಯಾವುದೇ ತರಬೇತಿಯು ಲಭ್ಯವಿದ್ದರೂ ಕೂಡ ಬಹಳಷ್ಟು ಸೇವಾನಿರತ ಶಿಕ್ಷಕರು ಅಂತಹವುಗಳಲ್ಲಿ ಭಾಗವಹಿಸುವ ಯಾವುದೇ ನೈಜ ಉದ್ದೇಶವನ್ನೂ ಹೊಂದಿರದ ಹಂತವನ್ನು ತಲುಪಿಬಿಟ್ಟಿರುತ್ತಾರೆ ಎನ್ನುವುದು ತರಬೇತಿಯ ಪರಿಣಾಮಕಾರಿತ್ವವನ್ನು ಕುರಿತಂತೆ ಕೈಗೊಂಡ ಹಲವಾರು ಅಧ್ಯಯನಗಳಲ್ಲಿ ಕಂಡುಬಂದ ಸಂಗತಿ.

ಈ ವರ್ಷದಿಂದ ರಾಜ್ಯವು ಸೇವಾನಿರತ ತರಬೇತಿಯ ಪರಿಕಲ್ಪನೆ ಹಾಗೂ ಅದು ಅನುಷ್ಠಾನಗೊಳ್ಳುವ ರೀತಿಯಲ್ಲಿ ಕೆಲವು ಮೂಲಭೂತ ಬದಲಾವಣೆಗಳನ್ನು ತಂದಿದೆ. ತಮ್ಮ ಆಸಕ್ತಿಗನುಗುಣವಾಗಿ ಆಯ್ಕೆಯ ಪಟ್ಟಿಯಿಂದ ತಾವು ಭಾಗವಹಿಸಲು ಇಷ್ಟಪಡುವ ನಿರ್ದಿಷ್ಟ ಮಾಡ್ಯೂಲ್‌ಗಳನ್ನು ಆಯ್ದುಕೊಳ್ಳಲು ಅನುವು ಮಾಡಿಕೊಡಲಾಗಿದೆ. ಈ ಮೂಲಕ ವೃತ್ತಿಪರ ಅಭಿವೃದ್ಧಿಯ ಹೊಣೆಯನ್ನು ಈಗ ಶಿಕ್ಷಕರಿಗೇ ವಹಿಸಲಾಗಿದೆ. ಮಾಡಲಾದ ಇನ್ನೆರಡು ಮುಖ್ಯ ಬದಲಾವಣೆಗಳು ಮಾಡ್ಯೂಲ್‌ಗಳ ಪರಿಕಲ್ಪನೆ, ವಿನ್ಯಾಸ ಹಾಗೂ ಶಿಕ್ಷಕರಿಗೆ ತರಬೇತಿ ನೀಡುವ ಸಂಪನ್ಮೂಲ ವ್ಯಕ್ತಿಗಳ ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ ಸಂಬಂಧಿಸಿದ್ದಾಗಿವೆ. ಜೊತೆಗೆ ಜಿಲ್ಲೆಗಳಲ್ಲಿ ತರಬೇತಿ ನಡೆಯುವ ಸ್ಥಳಗಳಲ್ಲಿ ಸೌಕರ್ಯಗಳನ್ನು ಸಾಧ್ಯವಾದಷ್ಟೂ ಸುಧಾರಿಸುವ ಪ್ರಯತ್ನಗಳಾಗಿವೆ. ಶಿಕ್ಷಣ ಇಲಾಖೆಯಲ್ಲಿಯೇ ಈ ಪ್ರಯತ್ನದ ಕುರಿತು ಸಕಾರಾತ್ಮಕ ಪರಿಸರವನ್ನು ಹುಟ್ಟುಹಾಕಲು ಅಗಾಧ ಪ್ರಮಾಣದ ಪ್ರಚಾರಾಂದೋಲನವು ನಡೆಯುತ್ತಿದೆ.

ಮಾಡ್ಯೂಲ್‌ಗಳ ಅಭಿವೃದ್ಧಿ ಕುರಿತಂತೆ ಹೇಳುವುದಾದರೆ, ಶಿಕ್ಷಕರ ತತ್‌ಕ್ಷಣದ ತರಗತಿಕೋಣೆ ಅಗತ್ಯಗಳನ್ನು ಪೂರೈಸಲು ಹಾಗೂ ಅವರ ದೀರ್ಘಕಾಲೀನ ಅಭಿವೃದ್ಧಿಯತ್ತಲೂ ಕಾಳಜಿ ವಹಿಸಲು ಎಸ್‌ಆರ್‌ಪಿಗಳ ತಂಡವೊಂದನ್ನು ರಚಿಸಲಾಗಿದೆ. ಅದರಲ್ಲಿ ಸುಮಾರು ಎಂಬತ್ತು ಜನ ಶಿಕ್ಷಕರಿದ್ದಾರೆ. ಇವರು ಏಳು ವಿಷಯಗಳಲ್ಲಿನ ಇಪ್ಪತ್ತೆಂಟು ಮಾಡ್ಯೂಲ್‌ಗಳನ್ನು ಹೆಚ್ಚು ಸಮೃದ್ಧವಾದ ರೀತಿಯಲ್ಲಿ ಪರಿಕಲ್ಪಿಸಲು ಹಾಗೂ ವಿನ್ಯಾಸಗೊಳಿಸಲು ಕಳೆದ ಎಂಟು ತಿಂಗಳುಗಳ ಕಾಲ ಶ್ರಮಪಟ್ಟಿದ್ದಾರೆ. ಶಿಕ್ಷಕರಲ್ಲಿ ಇನ್ನಷ್ಟು ಕಲಿಯುವ ಆಸಕ್ತಿಯನ್ನು ಮತ್ತೆ ಹುಟ್ಟುಹಾಕುವುದೂ ಇದರ ಉದ್ದೇಶವಾಗಿದೆ.

ಆ ನಂತರದ ಅತಿ ಮುಖ್ಯ ಸಂಗತಿಯೆಂದರೆ, ಪಠ್ಯವಿಷಯಗಳನ್ನು ನಿಭಾಯಿಸಬೇಕಾದ ಸಂಪನ್ಮೂಲ ವ್ಯಕ್ತಿಗಳ ಗುಣಮಟ್ಟ. ಪಠ್ಯಕ್ರಮ ಮತ್ತು ವಸ್ತುವಿಷಯಗಳು ಎಷ್ಟೇ ಉತ್ತಮವಾಗಿದ್ದರೂ ಕೂಡ ಸುಗಮಕಾರರು ಅಪೇಕ್ಷಿತ ಮಟ್ಟದಲ್ಲಿ ಕಾರ್ಯನಿರ್ವಹಿಸದಿದ್ದರೆ ಅಥವಾ ಅಂತರ್ಗತ ಮಿತಿಗಳನ್ನು

ಹೊಂದಿದ್ದರೆ ನಿರ್ದಿಷ್ಟ ಕಾರ್ಯಾಗಾರದ ಧ್ಯೇಯೋದ್ದೇಶಗಳು ಈಡೇರಲಾರವು ಎನ್ನುವುದು ಒಪ್ಪಿರುವ ವಿಚಾರ. ವಾಸ್ತವಿಕ ಸನ್ನಿವೇಶವು ಹೀಗಿದ್ದಾಗ, ಲಿಖಿತ ಪರೀಕ್ಷೆ, ಮುಖಾಮುಖಿ ಸಂವಹನಗಳನ್ನು (ಸಂದರ್ಶನ) ಒಳಗೊಂಡಂತೆ ಎಲ್ಲಾ ಜಿಲ್ಲೆಗಳಲ್ಲಿಯೂ ದಕ್ಷ ಸಂಪನ್ಮೂಲ ವ್ಯಕ್ತಿಗಳ ಆಯ್ಕೆ ಪ್ರಕ್ರಿಯೆಯ ಭಾಗವಾಗಿ ಕಠಿಣ ಮಾನದಂಡವನ್ನು ಬಳಸಲು ತೀರ್ಮಾನಿಸಲಾಯಿತು. ಇದರಿಂದ, ಆಯ್ಕೆಯಾದ ವ್ಯಕ್ತಿಗಳು ಸೂಕ್ತ ಮನೋಧೋರಣೆ ಮತ್ತು ಸಹಜ ಆಸಕ್ತಿಗಳನ್ನು ಹೊಂದಿದ್ದಾರೆಯೇ ಹಾಗೂ ಪರಿಕಲ್ಪನೆಗಳ ಅರ್ಥವನ್ನು ತಿಳಿದಿರುವುದು, ಕಲಿಯಲು ಬೇಕಾದ ತೆರೆದ ಮನಸ್ಸು, ಆಳವಾಗಿ ತೊಡಗಿಕೊಳ್ಳುವುದು, ಸುಗಮಕಾರರಾಗಿ ಕಾರ್ಯನಿರ್ವಹಿಸಲು ಅಗತ್ಯವಾದ ಕೌಶಲ, ಭಾಗವಹಿಸುವ ವಿವಿಧ ರೀತಿಯ ಶಿಕ್ಷಕರೊಡನೆ ವ್ಯವಹರಿಸುವ ಹಾಗೂ ಸವಾಲುಗಳನ್ನು ಎದುರಿಸುವ ಸಾಮರ್ಥ್ಯ, ಆತ್ಮವಿಶ್ವಾಸ ಹಾಗೂ ಶಿಕ್ಷಕರ ಮೇಲೆ ಬೀರುವ ಪ್ರಭಾವ ಇತ್ಯಾದಿ ಆವಶ್ಯಕ ಗುಣಗಳನ್ನು ಹೊಂದಿದ್ದಾರೆಯೇ ಎನ್ನುವುದನ್ನು ಖಚಿತಪಡಿಸುವುದಾಗಿತ್ತು. ಲಿಖಿತ ಪರೀಕ್ಷೆಯನ್ನು ವಿನ್ಯಾಸಗೊಳಿಸುವ, ಅದನ್ನು ವಿವಿಧ ಜಿಲ್ಲೆಗಳಲ್ಲಿ ನಡೆಸುವ, ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡುವ ಹಾಗೂ ಸಂದರ್ಶನಗಳ ಮೂಲಕ ಸೂಕ್ತ, ತಜ್ಞ ಸಂಪನ್ಮೂಲ ವ್ಯಕ್ತಿಗಳನ್ನು ಆಯ್ಕೆ ಮಾಡುವ ಎಲ್ಲಾ ಜವಾಬ್ದಾರಿಗಳನ್ನೂ ಎಸ್‌ಆರ್‌ಪಿಗಳ ತಂಡಕ್ಕೆ ವಹಿಸಲಾಗಿತ್ತು (ನಾನೂ ಅದರ ಭಾಗವಾಗಿದ್ದೆ.). ದಕ್ಷ, ತಜ್ಞ ಸಂಪನ್ಮೂಲ ವ್ಯಕ್ತಿಗಳನ್ನು ಅಭಿವೃದ್ಧಿ ಪಡಿಸುವ ಜವಾಬ್ದಾರಿಯೂ ಇದೇ ಎಸ್‌ಆರ್‌ಪಿಗಳ ಮೇಲಿದೆ.

ಆರು ಜಿಲ್ಲೆಗಳುದ್ದಕ್ಕೂ ಓಡಾಡಿ ಸಂವಹಿಸುವುದರ ಮೂಲಕ ನಾನು ಪಡೆದುಕೊಂಡ ಒಳನೋಟಗಳು ನನ್ನ ಅರಿವನ್ನು ಹೆಚ್ಚಿಸುವಂತದ್ದಾಗಿದ್ದವು. ಬೇರೆ ಜಿಲ್ಲೆಗಳಲ್ಲಿ ಇನ್ನಷ್ಟು ಬೇರೆ ಬೇರೆ ಅನುಭವಗಳಾಗಿವೆ. ಅವುಗಳಲ್ಲಿ ಕೆಲವು ವಿಭಿನ್ನವಾಗಿಯೂ ಇವೆ. ಆದರೆ ನಾನು ಹಂಚಿಕೊಳ್ಳುತ್ತಿರುವ ಕೆಲವು ಅನುಭವಗಳು ರಾಜ್ಯದಾದ್ಯಂತ ಕಂಡುಬರುವಂತಹವುಗಳಾಗಿವೆ.

ಅನುಸಂಧಾನ ಪ್ರಕ್ರಿಯೆಯಲ್ಲಿ ಭಾಗವಹಿಸಿದವರೆಲ್ಲರಿಂದಲೂ ಪ್ರಚಂಡವಾದ ಧನಾತ್ಮಕ ಸ್ಪಂದನೆ ಸಿಕ್ಕಿತು. ತಮಗೂ ಬೆಲೆಯಿದೆ, ಪ್ರಾಮುಖ್ಯತೆಯಿದೆ ಎಂದು ಅವರಿಗೆ ಅನ್ನಿಸಿತು. ಅದಕ್ಕಿಂತ ಮುಖ್ಯವಾಗಿ ಅವರಿಗೆ ತಾವು ಮಾಡಿದ ಕೆಲಸವನ್ನು ಹಂಚಿಕೊಳ್ಳಲು ಹಾಗೂ ತಮಗಿರುವ ಕಾಳಜಿಗಳನ್ನು ವ್ಯಕ್ತಪಡಿಸಲು ಸ್ಥಳಾವಕಾಶ ಸಿಕ್ಕಿತು. ಇಡೀ ಆಯ್ಕೆ ಪ್ರಕ್ರಿಯೆಯು ವೃತ್ತಿಪರವಾಗಿಯೂ ಪಾರದರ್ಶಕವಾಗಿಯೂ ಇತ್ತು. ತಾವಿನ್ನೂ ಜವಾಬ್ದಾರಿಯನ್ನು ಹೊರಲು ಸಿದ್ಧರಾಗಿಲ್ಲ ಎಂದು ಯಾರಿಗೆಲ್ಲ ಅನ್ನಿಸಿತೋ ಅವರು ಅಥವಾ ಯಾರಿಗೆ ಇನ್ನೂ ಅಂತಹ ಸಾಮರ್ಥ್ಯ ಸಾಲದು ಎಂದು ಕಂಡುಬಂದಿತೋ ಅವರು ಕೂಡ ಅವಕಾಶವು ದೊರಕಿದ ಭಾವನೆಯಲ್ಲಿ

ತೆರಳಿದರು. ಈ ಕುರಿತು ಸಮಯವನ್ನು ವ್ಯಯಿಸಲು ಆಸಕ್ತಿಯಿಲ್ಲದಿದ್ದವರು ಅಥವಾ ವೈಯಕ್ತಿಕ ತೊಂದರೆಗಳಿದ್ದವರನ್ನು ಪ್ರಕ್ರಿಯೆಯೊಳಗೆ ಬಲವಂತವಾಗಿ ನೂಕಲಿಲ್ಲ. ವೈಯಕ್ತಿಕ ಹಾಗೂ ವೃತ್ತಿಪರ ಅಡೆತಡೆಗಳನ್ನು ಗೆಲ್ಲುವುದಕ್ಕೆ ಯಾರು ವಿಶೇಷವಾದ ಧೈರ್ಯವನ್ನು ತೋರಿದರೋ ಅವರಿಗೆ ಮೆಚ್ಚುಗೆ ವ್ಯಕ್ತಪಡಿಸಲಾಯಿತು. ಅನೌಪಚಾರಿಕ ವ್ಯವಸ್ಥೆಯು ಮುಕ್ತ ಹಾಗೂ ಹಿತಕರ ವಾತಾವರಣವನ್ನು ಉಂಟುಮಾಡುವಲ್ಲಿ ನೆರವಾಯಿತು. ಅವರಲ್ಲಿ ಕೆಲವರು ಆ ಮುಂದಿನ ಪ್ರಕ್ರಿಯೆಗಳ ಬಗ್ಗೆ ಹಾಗೂ ಇದು ಮೊದಲು ತಮಗೆ ಹೇಗೆ ಉತ್ತಮ ಕಲಿಕೆಯಾಗಿ ಮಾರ್ಪಡಬಲ್ಲದು, ತಮ್ಮ ಮೂಲಕ ತದನಂತರದಲ್ಲಿ ಮಕ್ಕಳಿಗೆ ತಲುಪಬಲ್ಲದು ಎಂಬುದರ ಕುರಿತು ಕಾಳಜಿಯನ್ನು ಕೂಡ ವ್ಯಕ್ತಪಡಿಸಿದರು.

ಈ ಇಡೀ ಆಯ್ಕೆ ಪ್ರಕ್ರಿಯೆಯಿಂದ ದೊರೆತ ಮಹತ್ವದ ಒಳನೋಟವೆಂದರೆ, ವ್ಯವಸ್ಥೆಗೆ ಸಂಬಂಧಿಸಿದಂತೆ ತನ್ನೊಳಗೇ ಅಗಾಧ ಸಮಸ್ಯೆಗಳನ್ನು ಹೊಂದಿರುವ ಸಾರ್ವಜನಿಕ ಶಿಕ್ಷಣ ಇಲಾಖೆಯಂತಹ ಬೃಹತ್ ಸಾಂಸ್ಥಿಕ ವ್ಯವಸ್ಥೆಯೊಂದು ಇಂತಹ ದೂರದೃಷ್ಟಿಯನ್ನುಳ್ಳ ಪರಿವರ್ತನಾ ಉಪಕ್ರಮವನ್ನು ಕೈಗೊಳ್ಳಲು ಹಾಗೂ ಇಲಾಖೆಯೊಳಗೇ ಲಭ್ಯವಿರುವ ಅತ್ಯುತ್ತಮ ಪ್ರತಿಭೆಗಳನ್ನು ಗುರುತಿಸುವುದಕ್ಕಾಗಿ ತನ್ನ ಸಂಪನ್ಮೂಲಗಳನ್ನು ತೊಡಗಿಸಲು ಮುಕ್ತವಾಗಿ ಮುಂದೆ ಬಂದಿದೆ ಎನ್ನುವುದು. ಅವರು ದೀರ್ಘಾವಧಿಯಲ್ಲಿ ಶಿಕ್ಷಕರ ವೃತ್ತಿಪರ ಅಭಿವೃದ್ಧಿಯನ್ನು ಗಮನಾರ್ಹವಾಗಿ ಬಲಪಡಿಸುವ ಈ ಪ್ರಯಾಣದಲ್ಲಿ ತಮ್ಮನ್ನೇ ತಾವು ಬದ್ಧರಾಗಿಸಿಕೊಂಡಿದ್ದಾರೆ.

ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಪ್ರವಾಸ ಮಾಡುತ್ತಿದ್ದಾಗ ನಾನು ಗಮನಿಸಿದ ಮತ್ತೊಂದು ಪ್ರಮುಖ ಪ್ರವೃತ್ತಿಯೆಂದರೆ, ನಗರ ಜಿಲ್ಲೆಗಳಲ್ಲಿ ಶೇಕಡಾವಾರು ಗಮನಾರ್ಹ ಸಂಖ್ಯೆಯ ಜನ ತಮ್ಮ ಅಭಿವೃದ್ಧಿಗೆ ಸಮಯವನ್ನು ತೊಡಗಿಸಲು ಯಾವುದೇ ಆಸಕ್ತಿಯನ್ನು ತೋರಿಸುತ್ತಿಲ್ಲ ಎನ್ನುವುದು. ಉತ್ತರ ಮತ್ತು ದಕ್ಷಿಣ ಶೈಕ್ಷಣಿಕ ಜಿಲ್ಲೆಗಳನ್ನು ಒಳಗೊಂಡಿರುವ ಬೆಂಗಳೂರು ನಗರ ಜಿಲ್ಲೆಯಲ್ಲಿ ಸುಮಾರು ಶೇ. 40 ಶಿಕ್ಷಕರು ಲಿಖಿತ ಪರೀಕ್ಷೆಯಲ್ಲಿ ಸಾಕಷ್ಟು ಚೆನ್ನಾಗಿ ಮಾಡಿದ್ದರೂ ಸಂಪನ್ಮೂಲ ವ್ಯಕ್ತಿಗಳಾಗಲು ತಮಗೆ ಆಸಕ್ತಿಯಿಲ್ಲದಿರುವುದನ್ನು ವ್ಯಕ್ತಪಡಿಸಿದರು. ಹೋಲಿಸಿ ನೋಡಿದರೆ, ಗ್ರಾಮೀಣ ಜಿಲ್ಲೆಗಳಲ್ಲಿ ಬದ್ಧತೆಯ ಮಟ್ಟವು ಹೆಚ್ಚು. ಆದರೆ ಅವರಿಗೆ ಹೆಚ್ಚಿನ ಮಟ್ಟದ ಸಂಪನ್ಮೂಲ ವ್ಯವಸ್ಥೆಯ, ಬೆಂಬಲದ ಅಗತ್ಯವಿದೆ. ಈ ಪ್ರವೃತ್ತಿಯೇನೂ ಆಶ್ಚರ್ಯಕರವಾದುದಲ್ಲ. ಆದರೂ ಸರ್ಕಾರಿ ಶಾಲೆಗಳು ಅಳಿವಿನ ಭಯವನ್ನು ಎದುರಿಸುತ್ತಿರುವ ನಗರ ಪ್ರದೇಶಗಳಲ್ಲಿ ಕೆಲವು ಶಿಕ್ಷಕರ ಹಾಗೂ ಅಧಿಕಾರಿಗಳ ನಿರ್ಲಕ್ಷ್ಯದ ಮನೋಭಾವವನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಕಠಿಣವಾದ ಕೆಲವು ಕ್ರಮಗಳನ್ನು ತೆಗೆದುಕೊಳ್ಳಲೇಬೇಕಾಗಿದೆ.

'ನೀರಸವಾದ, ಏಕತಾನತೆಯಿಂದ ಕೂಡಿದ, ಪ್ರೇರಣಾತ್ಮಕವಾಗಿರದ ಶಾಲಾಬೋಧನೆಗೆ ಉಳಿದೆಲ್ಲವುಗಳ ಜೊತೆ ಶಿಕ್ಷಕರ ಕಳಪೆ ಸಾಮರ್ಥ್ಯವೇ ಕಾರಣ', ಹಾಗೂ 'ಶಿಕ್ಷಣದ ಗುಣಾತ್ಮಕ ಸುಧಾರಣೆಗೆ ಶಿಕ್ಷಕರ ವೃತ್ತಿಪರ ಶಿಕ್ಷಣ ಕಾರ್ಯಕ್ರಮವು ಉತ್ತಮವಾಗಿರಬೇಕಾದುದು ಅತ್ಯಂತ ಅವಶ್ಯಕ' ಎಂದು 1968ರಷ್ಟು ಹಿಂದೆಯೇ ಕೊಠಾರಿ ಶಿಕ್ಷಣ ಆಯೋಗವು ಅಭಿಪ್ರಾಯಪಟ್ಟಿತ್ತು.

ರಾಜ್ಯದಾದ್ಯಂತ ಸಮರ್ಥರಾದ ತಜ್ಞ, ದಕ್ಷ ಸಂಪನ್ಮೂಲ ವ್ಯಕ್ತಿಗಳನ್ನು ಅಭಿವೃದ್ಧಿಪಡಿಸುವ ಪ್ರಕ್ರಿಯೆಯು ದೃಢಸಂಕಲ್ಪದಿಂದ ಆರಂಭವಾಗಿದೆ. ಶಿಕ್ಷಕರ ತರಬೇತಿ ಕಾರ್ಯಕ್ರಮದ ಸ್ವರೂಪವನ್ನು ಬದಲಾಯಿಸಲಾಗಿದೆ. ವಾಸ್ತವಿಕವಾಗಿ ಸಪ್ಟೆಂಬರ್ ಐದರಂದು ಅದನ್ನು ಆರಂಭಿಸಲು ಯೋಜಿಸಿದ್ದು, ಅದನ್ನು 'ಗುರುಚೇತನ' ಎಂದು ಹೆಸರಿಸಿರುವುದು ಸೂಕ್ತವಾಗಿಯೇ ಇದೆ. ಡಾ.ರಾಧಾಕೃಷ್ಣನ್ ಅವರು ಆಶಿಸಿದ್ದ ಹಾಗೆ, ಈ ಅಭಿವೃದ್ಧಿ ಪ್ರಕ್ರಿಯೆಯು ಸಾವಿರಾರು ಶಿಕ್ಷಕರಿಗೆ 'ದೇಶದ ಅತ್ಯುತ್ಕೃಷ್ಟ ಮನಸ್ಸು'ಗಳಾಗಲು ಸ್ಫೂರ್ತಿ ನೀಡುತ್ತದೆ ಎಂಬ ನಿರೀಕ್ಷೆಯಿದೆ.

■

ಬಿ ಫಸ್ಟ್, 04–08–2017





13ನೇ ಸೆಪ್ಟೆಂಬರ್ 2017– ಆನೇಕಲ್ ಬ್ಲಾಕ್‌ನ ಗಣಿತ ಶಿಕ್ಷಕರಿಗಾಗಿ ಬೋಧನಾ–ಕಲಿಕೆ ಸಾಮಗ್ರಿಗಳ ತಯಾರಿ ಕುರಿತ ಕಾರ್ಯಾಗಾರದಲ್ಲಿ ಶಿಕ್ಷಕರೊಬ್ಬರು ಕಾರ್ಯನಿರತರಾಗಿರುವುದು. ಸ್ವ–ಅವಲೋಕನ ಆಧರಿತ ಹಾಗೂ ತರಗತಿ ಬೋಧನೆಗೆ ಪೂರಕವಾದ ಚಟುವಟಿಕೆಗಳಿಗೆ ಒತ್ತು ನೀಡಿದಾಗ ಇಂತಹ ಕಾರ್ಯಾಗಾರಗಳಲ್ಲಿ ಶಿಕ್ಷಕರ ಸಕ್ರಿಯ ಭಾಗವಹಿಸುವಿಕೆಯನ್ನು ಕಾಣಬಹುದು.

4 ಮತ್ತು 5ನೇ ಡಿಸೆಂಬರ್ 2017 – ಮೇಲಿನ ಚಿತ್ರದಲ್ಲಿ ಬೆಂಗಳೂರು ದಕ್ಷಿಣ–1 ಬ್ಲಾಕ್‌ನ ಗಣಿತ ಶಿಕ್ಷಕಿಯರು ಜ್ಯಾಮಿತಿ ಪರಿಕಲ್ಪನೆಯ ಮೇಲೆ ಹಮ್ಮಿಕೊಂಡ ಕಾರ್ಯಾಗಾರದಲ್ಲಿ ತೊಡಗಿರುವುದು.